ಭಾರತ ಸರ್ಕಾರದ ಇಂಧನ ಪೂರೈಕೆಯಲ್ಲಿಯ ಕಡಿತದಿಂದಾಗಿ ವಿಭಾಗವು ನವೆಂಬರ್ 90 ರ ಅಂತ್ಯಕ್ಕೆ 640 ವಾಹನಗಳಿಂದ 541 ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಿತು.

ಈ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಚಾಲಕ ಮತ್ತು ನಿರ್ವಾಹಕರನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಲಾಗಿದೆ. ಅಗತ್ಯತೆಯ 1294 ರ ಬದಲು 1316 ಚಾಲಕರು ಮತ್ತು 1294 ರ ಬದಲು 1340 ನಿರ್ವಾಹಕರು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪ್ರಕಾರ ವಾಹನ ಕೊರತೆಯಾಗಲಿ ಅಥವಾ ಸಾರಿಗೆ ಸಿಬ್ಬಂದಿಗಳ ಕೊರತೆಯಾಗಲಿ ಇರುವುದಿಲ್ಲ.

ಸಂತೆಯ ದಿನಗಳು ಮತ್ತು ಅನಿರೀಕ್ಷಿತ ಕೆಲವೊಂದು ಪ್ರಸಂಗಗಳಲ್ಲಿ ಪ್ರಯಾಣದ ಒತ್ತಡವು ಕಂಡುಬರುತ್ತದೆ. ವಿಶೇಷತಃ ಸಂತೆಯ ದಿನಗಳಲ್ಲಿ ಮತ್ತು ನಿಬಿಡ ಪ್ರಯಾಣದ ಭಾಗಗಳಲ್ಲಿ ಸಾರಿಗೆ ಸೇವೆಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಭಾರತ ಸರ್ಕಾರದ ಇಂಧನ ಪೂರೈಕೆಯಲ್ಲಿ ಮಾಡಲಾದ ಕಡಿತದ ಪರಿಣಾಮವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿಧಿಯಿಲ್ಲದೆ ಇಂಧನದ ಸರಬರಾಜಿಗೆ ಅನುಗುಣವಾಗಿ ಕಾರ್ಯಾಚರಣೆಯಲ್ಲಿ ಕಡಿತವನ್ನು ಮಾಡಿತು. ಯೋಜಿತ ಹೆಚ್ಚಿನ ಕಾರ್ಯಾಚರಣೆಗೆ ಅನುಗುಣವಾಗಿ ಬೇಕಾಗುವ ಹೆಚ್ಚಿನ ಇಂಧನವನ್ನು ಪೂರೈಸಲು ಭಾರತ ಸರ್ಕಾರವು ಭರವಸೆ ನೀಡಿದೆ. ಈ ಕಾರಣದಿಂದಾಗಿ ಡಿಸೆಂಬರ್ 1990 ರಿಂದ ಮಾರ್ಚ್ 1991ರ ವರೆಗಿನ ಅವಧಿಯಲ್ಲಿ ವಿಜಾಪುರ ವಿಭಾಗದಲ್ಲಿ 34 ಅನುಸೂಚಿಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದು ವಿಜಾಪುರ ಜಿಲ್ಲೆಯ ಪ್ರಯಾಣಿಕರ ಅಗತ್ಯತೆಯನ್ನು ಪೂರೈಸುವುದು.

3) ರಾಜ್ಯದಲ್ಲಿ ಅಗ್ನಿ ಶಾಮಕ ಕೇಂದ್ರಗಳನ್ನು ಹೆಚ್ಚಿಸುವುದು.

Sri. SADATHALI KHAN :– Sir, in Tamilnadu and Andhra Pradesh there are more than 300 fire stations, whereas in Karnataka there are abiout 40 fire stations. Further, a number of posts in the fire station are vacant. Because of the less numbers of fire stations and also number of posts being vacant has resulted in not making arrangements immediately to put the fire off in a number of cases resulting in crores of rupees of loss to property recently. Will the Government look into the mater seriously and fillup all the vacant posts without any further delay and also chalkout a programme to increase the number of fire station to be atleast on par with Andhra Pradesh and Tamilnadu in another 3 years.

SRI. DHARAMSINGH :–

It is ascertained that there are 202 Fire Stations in Tamilnadu and 211 fire stations in Andhra Pradesh. Karnataka has got 37 Fire Stations. The Government have approved a proposal to open 24 more Fire stations in 24 identified growth centres in the State over a period of 3 years. The first 4 in Bagalkot, Gadag, Haveri and Gangavathi have already been opened The remaining will be taken up in the next 2 years at the rate of 10 fire stations in 1990–91 and 9 fire stations during 1991–92.

The total cost of these 19 fire stations would around Rs. 11 crores.

There are about 262 direct recruitment vacancies of Firemen, Firemen drivers, sub-officers in the Fire services Department. The matter of permitting the Fire Services to to fill up these vacancies in relaxation of the economy orders is under active consideration of the Government.

There are 92 promotional vacancies in the cadre of Leading firemen. This could not be filled up as Special Leave petition is pending before the Supreme Court of India.

In the year 1988–89, the Fire Services Department attended 3,213 fire calls and saved Rs. 16.72 crores of property out of Rs. 24.54 crores involved of these Fire accidents. They also saved 114 human lives and 8 animal lives in that year.

During the year 1989–90, the Fire Service Department answered 3,656 fire calls and managed to save Rs. 35.58 crores of property out of Rs. 48.81 crores involved in the Fire accidents. They also saved 175 human lives and 23 animal lives from fire.

The Department has been doing good work and there has been no delay in attending to any Fire Calls. Government will do all its best to strengthen the Fire Services Department within the availability of resources.

4) ರಾಜ್ಯ ಗಡಿ ಪ್ರದೇಶದಲ್ಲಿ ಬರುವ ರಸ್ತೆ, ಸೇತುವೆಗಳ ಕಾಮಗಾರಿಗಳನ್ನು ಜರೂರಾಗಿ ಮಾಡಿಸುವುದು.

ಶ್ರೀ ಕೆ. ಕುಶಾಲ :– ಕರ್ನಾಟಕ ರಾಜ್ಯ ಗಡಿ ಪ್ರದೇಶದಲ್ಲಿ ಕ್ಷೇತ್ರವಾರು ಬರುವ ರಸ್ತೆ, ಸೇತುವೆ ನಿರ್ಮಾಣಕೆ ಕಾಮಗಾರಿ ಮಂಜೂರಾತಿ ಮತ್ತು ಹಣ ಬಿಡುಗಡೆ ಯಾವ ಹಂತದಲ್ಲಿದೆ ? ಮತ್ತು ಜಿಲ್ಲಾ ಪರಿಷತ್ ವ್ಯಾಪಿಯಲ್ಲಿ ಬರುವ ರಸ್ತೆಗಳು ಜಿಲ್ಲಾ ಪರಿಷತ್‌ಗಳ ಅಧೀನದಲ್ಲಿ ಅಭಿವೃದ್ಧಿ ಪಡಿಸಲು ಅಸಾಧ್ಯವಾದಂತೆ ಕ್ಷೇತ್ರಗಳಲ್ಲಿ ಬರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾಪವನ್ನು ಸರಕಾರಕ್ಕೆ ಕಳಿಸಲಾಗಿದ್ದು ಈ ಕಾಮಗಾರಿ ಮಂಜೂರಾತಿ ಮತ್ತು ಹಣ ಬಿಡುಗಡೆ ಯಾವ ಹಂತದಲ್ಲಿದೆ ? ಅಲ್ಲದೆ ಕ್ಷೇತ್ರದಲ್ಲಿ ಬರುವ (ಎ. ಪಿ. ಎಂ. ಸಿ.) ಕೃಷಿ ಉತ್ಪನ್ನ ಸೂರ್ಕೆಟಿಂಗ್ ಸೊಸೈಟಿ ಯೋಜನೆಯಂತೆ ತೆಗೆದುಕೊಂಡ ಕಾಮಗಾರಿಗಳ ಮಂಜೂರಾತಿ ಮತ್ತು ಹಣ ಬಿಡುಗಡೆ ಗೊಳಿಸುವುದು ಎನ್ನಲಾದ ಪ್ರಸ್ತಾವನೆ ಹಾಗೂ ಸರಕಾರದ ಆದೇಶ ಯಾವ ಹಂತವಲ್ಲಿದೆ ? ಸದರಿ ಬಾಬಿನ ಕಾಮಗಾರಿಗಳನ್ನು ಕೂಡಲೇ ತೆಗೆದುಕೊಳ್ಳುವುದೇ ? ಇಲ್ಲವಾದಲ್ಲಿ ಚಾಲ್ತಿ ಹಣಕಾಸಿನ ವರ್ಷದ ಕೊನೆಯಲ್ಲಿ ಕಾಮಗಾರಿ ಮಂಜೂರಾತಿ, ಹಣ ಬಿಡುಗಡೆ ಮಾಡಿದಾಗ ಕೆಲಸ ಕಾಮಗಾರಿ ನಷ್ಟ, ಹಾಗೂ ಬಿಡುಗಡೆ ಗೊಳಿಸಿದ ಹಣ ಲ್ಯಾಪ್ಸ್ ಆಗುವುದು ಮಾತ್ರ ವಲ್ಲದೇ ಕಾಮಗಾರಿ ವಹಿಸಿಕೊಳ್ಳಲು ಜನ ಬರುತ್ತಿಲ್ಲ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಮೇ ತಿಂಗಳಲ್ಲೇ ಪ್ರಾರಂಭವಾಗುವುದರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಸದರಿ ಬಾಬಿನ ಕಾಮಗಾರಿಗಳ ಮಂಜೂರಾತಿ ಹಾಗೂ ಹಣ ಬಿಡುಗಡೆಯನ್ನು ಕೂಡಲೇ ಮಾಡುವಂತೆ ಸರಕಾರವನ್ನು ಆಗ್ರಹಪಡಿಸುತ್ತೇನೆ.